
# ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾದಿ



**ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನಂ**

**ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ ದಕ್ಷಿಣಾಮ್ನಾಯ ಶ್ರೀಶಾರದಾಪೀಠಂ**

**ಶೃಂಗೇರಿ**

# ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ

## ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ

ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನಂ
ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ
ದಕ್ಷಿಣಾಮ್ನಾಯ ಶ್ರೀಶಾರದಾಪೀಠಂ, ಶೃಂಗೇರಿ – 577139

# ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಅನುಗ್ರಹ ಸಂದೇಶ

ಭಗವಂತನು ಭಗವದ್ಗೀತೆಯಲ್ಲಿ 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂಬುದಾಗಿ ಪ್ರತಿಜ್ಞೆಯನ್ನು ಮಾಡಿದ್ದಾನೆ. ಸನಾತನಧರ್ಮವನ್ನು ಕಾಪಾಡುವುದಕ್ಕೂ ಅಧರ್ಮವನ್ನು ನಾಶಮಾಡುವುದಕ್ಕೂ ತಾನು ಪ್ರತಿಯೊಂದು ಯುಗದಲ್ಲೂ ಈ ಭೂಮಿಯಲ್ಲಿ ಅವತರಿಸುತ್ತೇನೆ ಎಂಬುದು ಇದರ ಅರ್ಥ. ಅದರಂತೆಯೇ ಈ ಕಲಿಯುಗದಲ್ಲಿ ಭಗವಂತನು ಶ್ರೀ ಶಂಕರಭಗವತ್ಪಾದರ ರೂಪದಲ್ಲಿ ಅವತರಿಸಿದನು.

ಶ್ರೀ ಶಂಕರಭಗವತ್ಪಾದರು ಅನೇಕ ವಿಧವಾದ ವೇದ ವಿರುದ್ಧ ಮತಗಳನ್ನು ಖಂಡಿಸಿ, ನಮ್ಮ ಸನಾತನವೈದಿಕಧರ್ಮವನ್ನು ಪುನರುಜ್ಜೀವನಗೊಳಿಸಿ ಅದನ್ನು ಎಲ್ಲ ಕಡೆಯೂ ಪ್ರಚಾರಮಾಡಿ ಜನರು ಅದರಲ್ಲಿ ಪ್ರವರ್ತಿಸುವಂತೆ ಮಾಡಿದರು. ಅವರು ಲೋಕಕ್ಕೆ ಮಾಡಿದ ಈ ಉಪಕಾರವು ಅಸಾಧಾರಣವಾದದ್ದು. ಇಂದು ನಾವು ಸ್ವಲ್ಪವಾದರೂ ಧರ್ಮವನ್ನು ಆಚರಿಸುತ್ತ ಅದರಿಂದ ಶ್ರೇಯಸ್ಸನ್ನೂ ಧನ್ಯತಾಭಾವವನ್ನೂ ಪಡೆಯುತ್ತಿದ್ದೇವೆ

ಎಂದರೆ ಅದಕ್ಕೆ ಕಾರಣ ಆ ಮಹಾತ್ಮರು ನಮಗೆ ಮಾಡಿರುವಂತಹ ಉಪಕಾರ. ಹಾಗಾಗಿಯೇ ಶ್ರೀ ಶಂಕರಭಗವತ್ಪಾದರು ಸಮಸ್ತ ಆಸ್ತಿಕಜನರಿಗೆ ಅತ್ಯಂತ ಪೂಜನೀಯರು, ಸದಾಕಾಲ ಸ್ಮರಣೀಯರು ಆಗಿದ್ದಾರೆ. ಅವರನ್ನು ಪೂಜಿಸುವುದು, ಸ್ಮರಿಸುವುದು ನಮ್ಮೆಲ್ಲರ ಶ್ರೇಯಸ್ಸಿಗೆ ಕಾರಣವಾಗುತ್ತದೆ ಎನ್ನುವ ಉದ್ದೇಶದಿಂದ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠಾಧೀಶ್ವರರೂ ನಮ್ಮ ಗುರುವರ್ಯರೂ ಆದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಮಾನುಗ್ರಹದಿಂದ "ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ" ಎನ್ನುವ ಭವ್ಯವಾದ ಕಾರ್ಯಕ್ರಮವನ್ನು ರಾಜ್ಯದ ಎಲ್ಲೆಡೆಯಲ್ಲಿಯೂ ಆಯೋಜಿಸಲಾಗಿದೆ. ಶ್ರೀ ಶಂಕರಭಗವತ್ಪಾದರ ನಾಮಗಳನ್ನು ಸಾಮೂಹಿಕವಾಗಿ ಪಾರಾಯಣ ಮಾಡಿ, ಅವರನ್ನು ವಿಶೇಷವಾಗಿ ಆರಾಧಿಸಿ ಅದರಿಂದ ಪ್ರತಿಯೊಬ್ಬ ಆಸ್ತಿಕನು ಶ್ರೇಯಸ್ಸನ್ನು ಪಡೆಯಲಿ, ಲೋಕಕ್ಕೆ ಕಲ್ಯಾಣವುಂಟಾಗಲಿ ಎನ್ನುವುದೇ ಈ ಪಾರಾಯಣದ ಉದ್ದೇಶವಾಗಿದೆ.

ಭಗವಂತನ ನಾಮಗಳಿಗೆ ಅಸಾಧಾರಣವಾದ ಶಕ್ತಿಯಿದೆ. ಅದರಿಂದಲೇ ನಾವು ಭಗವಂತನನ್ನು 24 ನಾಮಗಳಿಂದ, 108 ನಾಮಗಳಿಂದ, ತ್ರಿಶತಿ ನಾಮಗಳಿಂದ, ಸಹಸ್ರನಾಮ ಗಳಿಂದ ಪೂಜಿಸುತ್ತೇವೆ. ಭಗವಂತನ ಒಂದು ನಾಮಕ್ಕೆ ಎಷ್ಟು ಶಕ್ತಿಯಿದೆ ಎನ್ನುವುದು

ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ – ‘ಏಕಸ್ಯ ನಾಮ್ನೋ ಯಾ ಶಕ್ತಿಃ ಪಾತಕಾನಾಂ ನಿವರ್ತನೇ । ತನ್ನಿವರ್ತ್ಯಮಘಂ ಕರ್ತುಂ ನಾಲಂ ಲೋಕಾಶ್ಚತುರ್ದಶ ॥’ ಭಗವಂತನ ಒಂದು ನಾಮವನ್ನು ಉಚ್ಚಾರಣೆ ಮಾಡುವುದರಿಂದ ಎಷ್ಟು ಪಾಪವು ನಾಶವಾಗುತ್ತದೋ, ಅಷ್ಟು ಪಾಪವನ್ನು ಮಾಡುವುದಕ್ಕೆ ಈ ಹದಿನಾಲ್ಕು ಲೋಕಗಳು ಸಾಕಾಗುವುದಿಲ್ಲ. ಅಂದರೆ ಈ ಹದಿನಾಲ್ಕು ಲೋಕಗಳಲ್ಲಿರುವ ಎಲ್ಲರೂ ಸೇರಿ ಎಷ್ಟು ಪಾಪವನ್ನು ಮಾಡುತ್ತಾರೋ ಅದಕ್ಕಿಂತ ಹೆಚ್ಚು ಪಾಪವನ್ನು ಹೋಗಲಾಡಿಸುವ ಶಕ್ತಿ ಭಗವಂತನ ಒಂದು ನಾಮಕ್ಕೆ ಇದೆ.

ಅಂದಮೇಲೆ ಈ ಅಷ್ಟೋತ್ತರ ಶತನಾಮಗಳನ್ನು ನಾವು ಅತ್ಯಂತ ಶ್ರದ್ಧಾಭಕ್ತಿಗಳಿಂದ ಹೇಳಿದರೆ ಅದರಿಂದ ನಮ್ಮ ಪಾಪಗಳೆಲ್ಲ ಕ್ಷಯವಾಗಿ ನಮಗೆ ಶ್ರೇಯಸ್ಸುಂಟಾಗುತ್ತದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಹಾಗಾಗಿ ಇಂತಹ ಪುಣ್ಯಪ್ರದವಾದ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞದಲ್ಲಿ ಪ್ರತಿಯೊಬ್ಬರೂ ಅತ್ಯಂತ ಶ್ರದ್ಧಾಭಕ್ತಿಗಳಿಂದ ಪಾಲ್ಗೊಂಡು ಶ್ರೀ ಶಂಕರಭಗವತ್ಪೂಜ್ಯಪಾದಾಚಾರ್ಯರ ಪರಮಾನುಗ್ರಹದಿಂದ ಶ್ರೇಯೋವಂತರಾಗಿ ಕೃತಾರ್ಥರಾಗಬೇಕೆಂದು ಬಯಸುತ್ತೇವೆ.

# ಏಕಶ್ಲೋಕೀ

ಕಿಂ ಜ್ಯೋತಿಸ್ತವ ಭಾನುಮಾನಹನಿ ಮೇ ರಾತ್ರೌ ಪ್ರದೀಪಾದಿಕಂ
ಸ್ಯಾದೇವಂ ರವಿದೀಪದರ್ಶನವಿಧೌ ಕಿಂ ಜ್ಯೋತಿರಾಖ್ಯಾಹಿ ಮೇ ।
ಚಕ್ಷುಸ್ತಸ್ಯ ನಿಮೀಲನಾದಿಸಮಯೇ ಕಿಂ ಧೀರ್ಧಿಯೋ ದರ್ಶನೇ
ಕಿಂ ತತ್ರಾಹಮತೋ ಭವಾನ್ ಪರಮಕಂ ಜ್ಯೋತಿಸ್ತದಸ್ಮಿ ಪ್ರಭೋ ॥

# ಶ್ರೀಗುರುವಂದನ

ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂದ್ಯಯಾ ।
ಕಿಂಕರೀ ಯಸ್ಯ ಸಾ ಮಾಯಾ ಶಂಕರಾಚಾರ್ಯಮಾಶ್ರಯೇ ॥ 1 ॥

ಪ್ರಹ್ಲಾದವರದೋ ದೇವೋ ಯೋ ನೃಸಿಂಹಃ ಪರೋ ಹರಿಃ ।
ನೃಸಿಂಹೋಪಾಸಕಂ ನಿತ್ಯಂ ತಂ ನೃಸಿಂಹಗುರುಂ ಭಜೇ ॥ 2 ॥

ಶ್ರೀಸಚ್ಚಿದಾನಂದ ಶಿವಾಭಿನವ್ಯನೃಸಿಂಹಭಾರತ್ಯಭಿಧಾನ್ ಯತೀಂದ್ರಾನ್ ।
ವಿದ್ಯಾನಿಧೀನ್ ಮಂತ್ರನಿಧೀನ್ ಸದಾತ್ಮನಿಷ್ಠಾನ್ ಭಜೇ
ಮಾನವಶಂಭುರೂಪಾನ್ ॥ 3 ॥

ಸದಾತ್ಮಧ್ಯಾನನಿರತಂ ವಿಷಯೇಭ್ಯಃ ಪರಾಙ್ಮುಖಮ್ ।
ನೌಮಿ ಶಾಸ್ತ್ರೇಷು ನಿಷ್ಣಾತಂ ಚಂದ್ರಶೇಖರಭಾರತೀಮ್ ॥ 4 ॥

ವಿವೇಕಿನಂ ಮಹಾಪ್ರಜ್ಞಂ ಧೈರ್ಯೌದಾರ್ಯಕ್ಷಮಾನಿಧಿಮ್ ।
ಸದಾಭಿನವಪೂರ್ವಂ ತಂ ವಿದ್ಯಾತೀರ್ಥಗುರುಂ ಭಜೇ ॥ 5 ॥

ಅಜ್ಞಾನಾಂ ಜಾಹ್ನವೀತೀರ್ಥಂ ವಿದ್ಯಾತೀರ್ಥಂ ವಿವೇಕಿನಾಮ್ ।
ಸರ್ವೇಷಾಂ ಸುಖದಂ ತೀರ್ಥಂ ಭಾರತೀತೀರ್ಥಮಾಶ್ರಯೇ ॥ 6 ॥

ವಿದ್ಯಾವಿನಯಸಂಪನ್ನಂ ವೀತರಾಗಂ ವಿವೇಕಿನಮ್ ।
ವಂದೇ ವೇದಾಂತತತ್ತ್ವಜ್ಞಂ ವಿಧುಶೇಖರಭಾರತೀಮ್ ॥ 7 ॥

# ಶ್ರೀ ಶಾರದಾ ಭುಜಂಗ ಪ್ರಯಾತಾಷ್ಟಕಮ್

ಸುವಕ್ಷೋಜಕುಂಭಾಂ ಸುಧಾಪೂರ್ಣಕುಂಭಾಂ
ಪ್ರಸಾದಾವಲಂಬಾಂ ಪ್ರಪುಣ್ಯಾವಲಂಬಾಮ್ ।
ಸದಾಸ್ಯೇಂದುಬಿಂಬಾಂ ಸದಾನೋಷ್ಠಬಿಂಬಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 1 ॥

ಕಟಾಕ್ಷೇ ದಯಾರ್ದ್ರಾಂ ಕರೇ ಜ್ಞಾನಮುದ್ರಾಂ
ಕಲಾಭಿರ್ವಿನಿದ್ರಾಂ ಕಲಾಪೈಃ ಸುಭದ್ರಾಮ್ ।
ಪುರಸ್ತ್ರೀಂ ವಿನಿದ್ರಾಂ ಪುರಸ್ತುಂಗಭದ್ರಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 2 ॥

ಲಲಾಮಾಂಕಫಾಲಾಂ ಲಸದ್ಗಾನಲೋಲಾಂ
ಸ್ವಭಕ್ತೈಕಪಾಲಾಂ ಯಶಃ ಶ್ರೀಕಪೋಲಾಮ್ ।
ಕರೇ ತ್ವಕ್ಷಮಾಲಾಂ ಕನತ್ಪ್ರತ್ನಲೋಲಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 3 ॥

ಸುಸೀಮಂತವೇಣೀಂ ದೃಶಾ ನಿರ್ಜಿತೈಣೀಂ
ರಮತ್ಕೀರವಾಣೀಂ ನಮದ್ವಜ್ರಪಾಣೀಮ್ ।
ಸುಧಾಮಂಥರಾಸ್ಯಾಂ ಮುದಾ ಚಿಂತ್ಯವೇಣೀಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 4 ॥

ಸುಶಾಂತಾಂ ಸುದೇಹಾಂ ದೃಗಂತೇ ಕಚಾಂತಾಂ
ಲಸತ್ಸಲ್ಲತಾಂಗೀಮನಂತಾಮಚಿಂತ್ಯಾಮ್ ।
ಸ್ಮೃತಾಂ ತಾಪಸೈಃ ಸರ್ಗಪೂರ್ವಸ್ಥಿತಾಂ ತಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 5 ॥

ಕುರಂಗೇ ತುರಂಗೇ ಮೃಗೇಂದ್ರೇ ಖಗೇಂದ್ರೇ
ಮರಾಲೇ ಮದೇಭೇ ಮಹೋಕ್ಷೇಽಧಿರೂಢಾಮ್ ।
ಮಹತ್ಯಾಂ ನವಮ್ಯಾಂ ಸದಾ ಸಾಮರೂಪಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 6 ॥

ಜ್ವಲತ್ಕಾಂತಿವಹ್ನಿಂ ಜಗನ್ಮೋಹನಾಂಗೀಂ
ಭಜನ್ಮಾನಸಾಂಭೋಜಸುಭ್ರಾಂತಭೃಂಗೀಮ್ ।
ನಿಜಸ್ತೋತ್ರಸಂಗೀತನೃತ್ಯಪ್ರಭಾಂಗೀಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 7 ॥

ಭವಾಂಭೋಜನೇತ್ರಾಜಸಂಪೂಜ್ಯಮಾನಾಂ
ಲಸನ್ಮಂದಹಾಸಪ್ರಭಾವಕ್ತ್ರಚಿಹ್ನಾಮ್ ।
ಚಲಚ್ಚಂಚಲಾಚಾರುತಾಟಂಕಕರ್ಣಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 8 ॥

# ಸಂಕಲ್ಪ

ಮಮೋಪಾತ್ತ–ಸಮಸ್ತ–ದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ
ಸರ್ವೇಷಾಂ ಆಸ್ತಿಕಮಹಾಜನಾನಾಂ ಕ್ಷೇಮಸ್ಥೈರ್ಯ–ವೀರ್ಯವಿಜಯ–ಅಭಯ–
ಆಯುರಾರೋಗ್ಯ–ಐಶ್ವರ್ಯಾಭಿವೃದ್ಧ್ಯರ್ಥಂ, ಸಮಸ್ತ–ದುರಿತೋಪಶಾಂತ್ಯರ್ಥಂ,
ಸಮಸ್ತ–ಮಂಗಲಾವಾಪ್ತ್ಯರ್ಥಂ, ಸಮಸ್ತ–ಅಭ್ಯುದಯಾರ್ಥಂ ಚ,
ಧರ್ಮಾರ್ಥ–ಕಾಮಮೋಕ್ಷಾಖ್ಯ–ಚತುರ್ವಿಧಪುರುಷಾರ್ಥಸಿದ್ಧ್ಯರ್ಥಂ,
ಶ್ರೀಮಚ್ಛಂಕರಭಗವತ್ಪಾದಾಚಾರ್ಯಾಖ್ಯ–ಸದ್ಗುರುಪ್ರಸಾದಸಿದ್ಧ್ಯರ್ಥಂ,
ಶ್ರೀಸದ್ಗುರುಪ್ರಸಾದೇನ ಸರ್ವೇಷಾಂ ಆಸ್ತಿಕಮಹಾಜನಾನಾಂ ಸದ್ವಿದ್ಯಾ–
ಸದ್ಬುದ್ಧಿಪ್ರಾಪ್ತ್ಯರ್ಥಂ, ಚಿತ್ತಶಾಂತಿ–ಸುಖಸಂತೋಷಾದ್ಯಾಭಿವೃದ್ಧ್ಯರ್ಥಂ,
ದೇಶೋಪಪ್ಲವನಿವೃತ್ಯರ್ಥಂ, ಶ್ರೀಮಚ್ಛಂಕರಭಗವತ್ಪಾದಾಚಾರ್ಯ–ಪ್ರೀತ್ಯರ್ಥಂ
ಶ್ರೀಮಚ್ಛಂಕರಭಗವತ್ಪಾದಾಚಾರ್ಯ–ಅಷ್ಟೋತ್ತರ–ಶತನಾಮ–ಪಾರಾಯಣಂ ಕರಿಷ್ಯೇ ॥

# ಶ್ರೀಶಂಕರ ಭಗವತ್ಪಾದಾಚಾರ್ಯ
# ಅಷ್ಟೋತ್ತರ ಶತನಾಮಾವಳಿ

ಶ್ರೀಶಂಕರಾಚಾರ್ಯವರ್ಯಾಯ ನಮಃ

ಬ್ರಹ್ಮಾನಂದಪ್ರದಾಯಕಾಯ ನಮಃ

ಅಜ್ಞಾನತಿಮಿರಾದಿತ್ಯಾಯ ನಮಃ

ಸುಜ್ಞಾನಾಂಬುಧಿಚಂದ್ರಮಸೇ ನಮಃ

ವರ್ಣಾಶ್ರಮಪ್ರತಿಷ್ಠಾತ್ರೇ ನಮಃ 5

ಶ್ರೀಮತೇ ನಮಃ

ಮುಕ್ತಿಪ್ರದಾಯಕಾಯ ನಮಃ

ಶಿಷ್ಯೋಪದೇಶನಿರತಾಯ ನಮಃ

ಭಕ್ತಾಭೀಷ್ಟಪ್ರದಾಯಕಾಯ ನಮಃ

ಸೂಕ್ಷ್ಮತತ್ತ್ವರಹಸ್ಯಜ್ಞಾಯ ನಮಃ 10

ಕಾರ್ಯಾಕಾರ್ಯಪ್ರಬೋಧಕಾಯ ನಮಃ

ಜ್ಞಾನಮುದ್ರಾಂಚಿತಕರಾಯ ನಮಃ

ಶಿಷ್ಯಹೃತ್ತಾಪಹಾರಕಾಯ ನಮಃ

ಪರಿವ್ರಾಜಾಶ್ರಮೋದ್ಧರ್ತ್ರೇ ನಮಃ

ಸರ್ವತಂತ್ರಸ್ವತಂತ್ರಧಿಯೇ ನಮಃ 15

ಅದ್ವೈತಸ್ಥಾಪನಾಚಾರ್ಯಾಯ ನಮಃ

ಸಾಕ್ಷಾಚ್ಛಂಕರರೂಪಧೃತೇ ನಮಃ

ಷಣ್ಮತಸ್ಥಾಪನಾಚಾರ್ಯಾಯ ನಮಃ

ತ್ರಯೀಮಾರ್ಗಪ್ರಕಾಶಕಾಯ ನಮಃ

ವೇದವೇದಾಂತತತ್ತ್ವಜ್ಞಾಯ ನಮಃ 20

ದುರ್ವಾದಿಮತಖಂಡನಾಯ ನಮಃ

ವೈರಾಗ್ಯನಿರತಾಯ ನಮಃ

ಶಾಂತಾಯ ನಮಃ

ಸಂಸಾರಾರ್ಣವತಾರಕಾಯ ನಮಃ

ಪ್ರಸನ್ನವದನಾಂಭೋಜಾಯ ನಮಃ 25

ಪರಮಾರ್ಥಪ್ರಕಾಶಕಾಯ ನಮಃ

ಪುರಾಣಸ್ಮೃತಿಸಾರಜ್ಞಾಯ ನಮಃ

ನಿತ್ಯತೃಪ್ತಾಯ ನಮಃ

ಮಹತೇ ನಮಃ

ಶುಚಯೇ ನಮಃ 30

ನಿತ್ಯಾನಂದಾಯ ನಮಃ

ನಿರಾತಂಕಾಯ ನಮಃ

ನಿಸ್ಸಂಗಾಯ ನಮಃ

ನಿರ್ಮಲಾತ್ಮಕಾಯ ನಮಃ

ನಿರ್ಮಮಾಯ ನಮಃ 35

ನಿರಹಂಕಾರಾಯ ನಮಃ

ವಿಶ್ವವಂದ್ಯಪದಾಂಬುಜಾಯ ನಮಃ

ಸತ್ತ್ವಪ್ರಧಾನಾಯ ನಮಃ

ಸದ್ಭಾವಾಯ ನಮಃ

ಸಂಖ್ಯಾತೀತಗುಣೋಜ್ಜ್ವಲಾಯ ನಮಃ 40

ಅನಘಾಯ ನಮಃ

ಸಾರಹೃದಯಾಯ ನಮಃ

ಸುಧಿಯೇ ನಮಃ

ಸಾರಸ್ವತಪ್ರದಾಯ ನಮಃ

ಸತ್ಯಾತ್ಮನೇ ನಮಃ 45

ಪುಣ್ಯಶೀಲಾಯ ನಮಃ

ಸಾಂಖ್ಯಯೋಗವಿಚಕ್ಷಣಾಯ ನಮಃ

ತಪೋರಾಶಯೇ ನಮಃ

ಮಹಾತೇಜಸೇ ನಮಃ

ಗುಣತ್ರಯವಿಭಾಗವಿದೇ ನಮಃ 50

ಕಲಿಘ್ನಾಯ ನಮಃ

ಕಾಲಕರ್ಮಜ್ಞಾಯ ನಮಃ

ತಮೋಗುಣನಿವಾರಕಾಯ ನಮಃ

ಭಗವತೇ ನಮಃ

ಭಾರತೀಜೇತ್ರೇ ನಮಃ 55

ಶಾರದಾಹ್ವಾನಪಂಡಿತಾಯ ನಮಃ

ಧರ್ಮಾಧರ್ಮವಿಭಾಗಜ್ಞಾಯ ನಮಃ

ಲಕ್ಷ್ಯಭೇದಪ್ರದರ್ಶಕಾಯ ನಮಃ

ನಾದಬಿಂದುಕಲಾಭಿಜ್ಞಾಯ ನಮಃ

ಯೋಗಿಹೃತ್ಪದ್ಮಭಾಸ್ಕರಾಯ ನಮಃ 60

ಅತೀಂದ್ರಿಯಜ್ಞಾನನಿಧಯೇ ನಮಃ

ನಿತ್ಯಾನಿತ್ಯವಿವೇಕವತೇ ನಮಃ

ಚಿದಾನಂದಾಯ ನಮಃ

ಚಿನ್ಮಯಾತ್ಮನೇ ನಮಃ

ಪರಕಾಯಪ್ರವೇಶಕೃತೇ ನಮಃ 65

ಅಮಾನುಷಚರಿತ್ರಾಢ್ಯಾಯ ನಮಃ

ಕ್ಷೇಮದಾಯಿನೇ ನಮಃ

ಕ್ಷಮಾಕರಾಯ ನಮಃ

ಭವ್ಯಾಯ ನಮಃ

ಭದ್ರಪ್ರದಾಯ ನಮಃ 70

ಭೂರಿಮಹಿಮ್ನೇ ನಮಃ

ವಿಶ್ವರಂಜಕಾಯ ನಮಃ

ಸ್ವಪ್ರಕಾಶಾಯ ನಮಃ

ಸದಾಧಾರಾಯ ನಮಃ

ವಿಶ್ವಬಂಧವೇ ನಮಃ 75

ಶುಭೋದಯಾಯ ನಮಃ

ವಿಶಾಲಕೀರ್ತಯೇ ನಮಃ

ವಾಗೀಶಾಯ ನಮಃ

ಸರ್ವಲೋಕಹಿತೋತ್ಸುಕಾಯ ನಮಃ

ಕೈಲಾಸಯಾತ್ರಾ-ಸಂಪ್ರಾಪ್ತ-ಚಂದ್ರಮೌಲಿ-ಪ್ರಪೂಜಕಾಯ ನಮಃ

ಕಾಂಚ್ಯಾಂ ಶ್ರೀಚಕ್ರರಾಜಾಖ್ಯ-ಯಂತ್ರಸ್ಥಾಪನ-ದೀಕ್ಷಿತಾಯ ನಮಃ

ಶ್ರೀಚಕ್ರಾತ್ಮಕ-ತಾಟಂಕ-ತೋಷಿತಾಂಬಾ-ಮನೋರಥಾಯ ನಮಃ

ಶ್ರೀಬ್ರಹ್ಮಸೂತ್ರೋಪನಿಷದ್ಭಾಷ್ಯಾದಿ-ಗ್ರಂಥಕಲ್ಪಕಾಯ ನಮಃ

ಚತುರ್ದಿಕ್ಚತುರಾಮ್ನಾಯ ಪ್ರತಿಷ್ಠಾತ್ರೇ ನಮಃ

ಮಹಾಮತಯೇ ನಮಃ 85

ದ್ವಿಸಪ್ತತಿಮತೋಚ್ಛೇತ್ರೇ ನಮಃ

ಸರ್ವದಿಗ್ವಿಜಯಪ್ರಭವೇ ನಮಃ

ಕಾಷಾಯವಸನೋಪೇತಾಯ ನಮಃ

ಭಸ್ಮೋದ್ಧೂಲಿತವಿಗ್ರಹಾಯ ನಮಃ

ಜ್ಞಾನಾತ್ಮಕೈಕದಂಡಾಢ್ಯಾಯ ನಮಃ 90

ಕಮಂಡಲುಲಸತ್ಕರಾಯ ನಮಃ

ಗುರುಭೂಮಂಡಲಾಚಾರ್ಯಾಯ ನಮಃ

ಭಗವತ್ಪಾದಸಂಜ್ಞಕಾಯ ನಮಃ

ವ್ಯಾಸಸಂದರ್ಶನಪ್ರೀತಾಯ ನಮಃ

ಋಷ್ಯಶೃಂಗಪುರೇಶ್ವರಾಯ ನಮಃ 95

ಸೌಂದರ್ಯಲಹರೀಮುಖ್ಯ–ಬಹುಸ್ತೋತ್ರ–ವಿಧಾಯಕಾಯ ನಮಃ

ಚತುಷ್ಷಷ್ಟಿಕಲಾಭಿಜ್ಞಾಯ ನಮಃ

ಬ್ರಹ್ಮರಾಕ್ಷಸಮೋಕ್ಷದಾಯ ನಮಃ

ಶ್ರೀಮನ್ಮಂಡನಮಿಶ್ರಾಖ್ಯ–ಸ್ವಯಂಭೂಜಯ–ಸನ್ನುತಾಯ ನಮಃ

ತೋಟಕಾಚಾರ್ಯಸಂಪೂಜ್ಯಾಯ ನಮಃ 100

ಪದ್ಮಪಾದಾರ್ಚಿತಾಂಘ್ರಿಕಾಯ ನಮಃ

ಹಸ್ತಾಮಲಕ–ಯೋಗೀಂದ್ರ–ಬ್ರಹ್ಮಜ್ಞಾನ–ಪ್ರದಾಯಕಾಯ ನಮಃ

ಸುರೇಶ್ವರಾಖ್ಯ–ಸಚ್ಛಿಷ್ಯ–ಸನ್ನ್ಯಾಸಾಶ್ರಮದಾಯಕಾಯ ನಮಃ

ನೃಸಿಂಹಭಕ್ತಾಯ ನಮಃ

ಸದ್ರತ್ನಗರ್ಭಹೇರಂಬ–ಪೂಜಕಾಯ ನಮಃ

ವ್ಯಾಖ್ಯಾಸಿಂಹಾಸನಾಧೀಶಾಯ ನಮಃ

ಜಗತ್ಪೂಜ್ಯಾಯ ನಮಃ

ಜಗದ್ಗುರವೇ ನಮಃ 108

ಶ್ರೀಮಚ್ಛಂಕರಭಗವತ್ಪಾದಾಚಾರ್ಯಸ್ವಾಮಿನೇ ನಮಃ

# ಮಂಗಳ

ಮಂಗಳಂ ಗುರು ಶ್ರೀ ಚಂದ್ರಮೌಳೀಶ್ವರಗೇ
ಶಕ್ತಿಗಣಪತಿ ಶಾರದಾಂಬೆಗೆ ಶಂಕರಾಚಾರ್ಯರಿಗೇ ॥ ಪ ॥

ಕಾಲಭೈರವಗೇ ಕಾಳಿ ದುರ್ಗಿಗೇ
ವೀರ ಧೀರ ಶೂರ ಹನುಮ ಮಾರುತಿ ಚರಣಕ್ಕೇ ॥ 1 ॥

ಮಲ್ಲಿಕಾರ್ಜುನಗೇ ಚೆಲ್ವ ಜನಾರ್ದನಗೇ
ಅಂಬಾಭವಾನಿ ಕಂಬದ ಗಣಪತಿ ಚಂಡಿಚಾಮುಂಡಿಗೇ ॥ 2 ॥

ವಿದ್ಯಾರಣ್ಯರಿಗೇ ವಿದ್ಯಾಶಂಕರಗೇ
ವಾಗೀಶ್ವರಿಗೇ ವಜ್ರದೇಹ ಗರುಡಾಂಜನೇಯರಿಗೇ ॥ 3 ॥

ತುಂಗಭದ್ರೆಗೇ ಶೃಂಗನಿವಾಸಿನಿಗೇ
ಶೃಂಗೇರಿಪುರದೊಳು ನೆಲೆಸಿರುವಂಥ ಶಾರದಾಂಬೆಗೇ ॥ 4 ॥

ಸಚ್ಚಿದಾನಂದ ಶಿವ ಅಭಿನವ ನೃಸಿಂಹಭಾರತಿಗೇ
ಚಂದ್ರಶೇಖರಭಾರತೀ ಗುರು ಸಾರ್ವಭೌಮರಿಗೇ
ಚಂದ್ರಶೇಖರಭಾರತೀ ಗುರು ವಿದ್ಯಾತೀರ್ಥರಿಗೇ
ಚಂದ್ರಶೇಖರಭಾರತೀ ಗುರು ಭಾರತೀತೀರ್ಥರಿಗೇ
ಚಂದ್ರಶೇಖರಭಾರತೀ ಗುರು ವಿಧುಶೇಖರಭಾರತಿಗೇ ॥ 5 ॥





ಜಗದ್ಗುರು ಶ್ರೀಶ್ರೀಶ್ರೀ ಭಾರತೀತೀರ್ಥ
ಮಹಾಸನ್ನಿಧಾನಂಗಳವರು



ಜಗದ್ಗುರು ಶ್ರೀಶ್ರೀಶ್ರೀ ವಿಧುಶೇಖರಭಾರತೀ
ಸನ್ನಿಧಾನಂಗಳವರು